ಇ) ತಪಾಸಣೆ ಮಾಡಿದ್ದಾರೆ.

ಈ) ಕರ್ನಾಟಕ ಲೋಕಾಯುಕ್ತ ಅವರು ಸೂಕ್ತ ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ ಮೇರೆಗೆ ದಿನಾಂಕ: 02.09.2011ರಂದು ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ಚಿಕ್ಕೋಡಿಯವರು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಇದಲ್ಲದೇ ಬೆಳಗಾವಿ ಜಿಲ್ಲೆಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೇಮಕಾತಿಯಾದ ಒಂಬುಡ್ಸಮನ್‌ರವರ ಮುಂದೆ ಸಹ ಸದರಿ ದೂರು ವಿಚಾರಣಾ ಹಂತದಲ್ಲಿ ಇರುತ್ತದೆ. ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಂದ ವಿಚಾರಣಾ ವರದಿ ಬಂದ ನಂತರ ನಿಯಮಾನುಸಾರ ಸರ್ಕಾರವು ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು.

ಉ) ಸದರಿ ದೂರು ವಿಚಾರಣಾ ಹಂತದಲ್ಲಿರುತ್ತದೆ.

ಮಂಗಳೂರಿನಲ್ಲಿ ಹೊಸ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ

711 (1088) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಸರ್ಕಾರ ಎಷ್ಟು ಪ್ರಥಮದರ್ಜೆ ಕಾಲೇಜು ಪ್ರಾರಂಭಿಸಿದೆ; (ಕ್ಷೇತ್ರವಾರು ವಿವರ ನೀಡುವುದು)

ಆ) ಹೊಸದಾಗಿ ಸ್ಥಾಪಿತವಾದ ಕಾಲೇಜುಗಳಲ್ಲಿ ಉಪನ್ಯಾಸಕರ ಮತ್ತು ಮೂಲಭೂತ ಸೌಲಭ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಉಪನ್ಯಾಸಕರ ಹುದ್ದೆಭರ್ತಿ ಮಾಡಲು ಮತ್ತು ಮೂಲಭೂತ ಸೌಲಭ್ಯ ಕಲ್ಪಿಸಲು ಯಾವ ಕ್ರಮ ಕೈಗೊಂಡಿದೆ;

ಈ) ಮಂಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಪ್ರಥಮದರ್ಜೆ ಕಾಲೇಜು ಸ್ಥಾಪನೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಮಂಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಪ್ರಥಮದರ್ಜೆ ಕಾಲೇಜು ಸ್ಥಾಪಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಊ) ಮುಂದಿನ ಸಾಲಿನಲ್ಲಿ ಮಂಗಳೂರಿನಲ್ಲಿ ಹೊಸದಾಗಿ ಪ್ರಥಮದರ್ಜೆ ಕಾಲೇಜು ಸ್ಥಾಪಿಸಲಾಗುವುದೇ?

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಕಳೆದ 3 ವರ್ಷಗಳಲ್ಲಿ ಒಟ್ಟು 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. (ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ)

ಆ) ಬಂದಿದೆ.

ಇ) ಇಲಾಖೆಯಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗೆ ಎದುರಾಗಿ ಅವಶ್ಯಕತೆಗನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತಿದೆ ಹಾಗೂ ಖಾಯಂ ಉಪನ್ಯಾಸಕರ ನೇಮಕಾತಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಮೂಲಭೂತ ಸೌಲಭ್ಯಗಳನ್ನು ನೀಡಲು ಇಲಾಖೆ ಒದಗಿಸಿರುವ ಅನುದಾನದ ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.

ಈ) ಬಂದಿದೆ.

ಉ) ಮಂಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉಳ್ಳಾಲ ಹಾಗೂ ಬಂಟ್ವಾಳ ತಾಲ್ಲೂಕಿನ ಕನ್ಯಾನ ಹಾಗೂ ಮುಡಿಸು ಗ್ರಾಮದಲ್ಲಿ ಹೊಸ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಅಗತ್ಯತೆ ಮತ್ತು ಅನುದಾನದ ಲಭ್ಯತೆಯನ್ನಾಧರಿಸಿ ಕ್ರಮ ವಹಿಸಲಾಗುವುದು.

ಊ) ಅಗತ್ಯತೆ ಮತ್ತು ಅನುದಾನದ ಲಭ್ಯತೆಯನ್ನಾಧರಿಸಿ ಪ್ರಥಮದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಕ್ರಮ ವಹಿಸಲಾಗುವುದು.

ಅನುಬಂಧ – 1

ಕಳೆದ ಮೂರು ವರ್ಷಗಳಲ್ಲಿ ಪ್ರಾರಂಭಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಕಾಲೇಜಿನ ಹೆಸರು (ಕ್ಷೇತ್ರವಾರು)
1	ಸ.ಪ್ರ.ದ.ಕಾ. ಹನಗೋಡು (ಹುಣಸೂರು)
2	ಸ.ಪ್ರ.ದ.ಕಾ. ಹೆತ್ತೂರು (ಸಕಲೇಶಪುರ)
3	ಸ.ಪ್ರ.ದ.ಕಾ. ಯಗಟಿ (ಕಡೂರು)

4	ಸ.ಪ್ರ.ದ.ಕಾ. ಬಾಡ(ಕುಮಟಾ)
5	ಸ.ಪ್ರ.ದ.ಕಾ. ಹಿತ್ನಾಳ (ಕೊಪ್ಪಳ)
6	ಸ.ಪ್ರ.ದ.ಕಾ. ಅಳವಂಡಿ (ಕೊಪ್ಪಳ)
7	ಸ.ಪ್ರ.ದ.ಕಾ. ಮೇಲುಕೋಟೆ (ಮೇಲುಕೋಟೆ)
8	ಸ.ಪ್ರ.ದ.ಕಾ. ಚಿಕ್ಕಬಾಸೂರು (ಬ್ಯಾಡಗಿ)
9	ಸ.ಪ್ರ.ದ.ಕಾ. ತುಮಕೂರು (ತುಮಕೂರು)

ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

ಅನುಬಂಧ-2

ಕ್ರ.ಸಂ	ಕಾಲೇಜಿನ ಹೆಸರು	೨ ವರ್ಷಗಳಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಒದಗಿಸಿರುವ ಅನುದಾನ									
		2009-10				2010-11				2011-12	ಒಟ್ಟು
		ಕಛೇರಿ ಪೀಠ	ಪೀಠೋಪಕರಣ	ಪುಸ್ತಕ	ಪ.ಜಾ/ಪ.ಪಂ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಇನ್ನಿತರೆಗಳಿಗಾಗಿ	ಕಛೇರಿ ಪೀಠ	ಪೀಠೋಪಕರಣ	ಪುಸ್ತಕ/ಜೆರಾಕ್ಸ್/ ಪೀಠೋಪಕರಣ / ಇನ್ನಿತರೆ	ಪ.ಜಾ/ಪ.ಪಂ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಇನ್ನಿತರೆಗಳಿಗಾಗಿ	ಕಛೇರಿ ಪೀಠಕ್ಕಾಗಿ	
1	ಸ.ಪ್ರ.ದ.ಕಾ. ಹಸಗೋಡು (ಹುಣಸೂರು)	20000	30000	30000	300000	10000	-	134000	87328	15000	626328
2	ಸ.ಪ್ರ.ದ.ಕಾ. ಹೆತ್ತೂರು(ಸಕಲೇಶಪುರ)	20000	30000	30000	300000	26000	200000	134000	53664	15000	808664
3	ಸ.ಪ್ರ.ದ.ಕಾ. ಯಗಚ(ಕಡೂರು)	20000	-	30000	300000	28000	200000	134000	64915	15000	791915
4	ಸ.ಪ್ರ.ದ.ಕಾ. ಬಾಡ (ಕುಮಟಾ)	20000	-	30000	300000	18000	-	134000	17166	15000	534166
5	ಸ.ಪ್ರ.ದ.ಕಾ. ಹಿತ್ಲಾಳ (ಕೊಪ್ಪಳ)	20000	-	30000	300000	18000	-	134000	56332	15000	573332
6	ಸ.ಪ್ರ.ದ.ಕಾ. ಅಳವಂಡಿ(ಕೊಪ್ಪಳ)	20000	-	30000	300000	18000	-	134000	126332	15000	643332
7	ಸ.ಪ್ರ.ದ.ಕಾ. ಮೇಲುಕೋಟೆ (ಮೇಲುಕೋಟೆ)	20000	-	30000	300000	8000	-	134000	34332	15000	541332
8	ಸ.ಪ್ರ.ದ.ಕಾ. ಜಕ್ಕಬಾಹಳ್ಳಿ(ಬ್ಯಾಡಗಿ)	-	-	-	-	-	200000	134000	47749	15000	396749
9	ಸ.ಪ್ರ.ದ.ಕಾ. ತುಮಕೂರು (ತುಮಕೂರು).	-	-	-	-	-	-	-	-	20000	20000
ಒಟ್ಟು ರೂ.											4935819

ಕರಡು ಅಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು